
ಗೋಣಿಯಲ್ಲಿ ಕೊಂಡುಹೋಗಿ ಮಾರು. ನಾನು ಅಷ್ಟು ಇಷ್ಟು ಅಂತ ಅದರ ಬೆಲೆ ಹೇಳುವುದಿಲ್ಲ. ನಿನಗೆ ಎಷ್ಟು ಕೊಡಬೇಕು ಎಂದು ಅನಿಸುತ್ತೋ ಅಷ್ಟು ಕೊಟ್ಟರೆ ಸಾಕು' ಎಂದರು.

ಮಾಂಕು ಕುಪ್ಪಣ್ಣಯ್ಯ ಕೊಟ್ಟ ಚಿಲ್ಲರೆ ಹಣವನ್ನು ತನ್ನ ಜೇಬಿಗೆ ಇಳಿಸುತ್ತಾ 'ನಿಮ್ಮದಕ್ಕೆ ಏನೆಂದರೂ ಎರಡು ಮೂರು ಸಾವಿರ ರೂಪಾಯಿ ಬಂದೀತು. ನಾನು ಈಗ ಕೊಂಡು ಹೋಗುತ್ತಿರುವ ಈ ಗೋಣಿಗೆ ಹುಸೇನಿ ಏನಿಲ್ಲ ಎಂದರೂ ಐದು ನೂರು ಅಥವಾ ಆರು ನೂರು ಕೊಟ್ಟಾನು. ಅವನು ಮೋಸಗಾರನಲ್ಲ. ಪ್ರಾಮಾಣಿಕ ಎಂದು ಅವನ ಮುಖವೇ ಹೇಳುತ್ತದೆ' ಎಂದವನೇ 'ನಾನು ಬೇಕಾದರೆ ಹುಸೇನಿಗೆ ಹೇಳುತ್ತೇನೆ. ಅವನು ಜೀವಬಿಟ್ಟು (ಖುಶಿ ಎಂಬ ಅರ್ಥ) ನಿಮ್ಮಲ್ಲಿಗೆ ಓಡಿ ಬರುತ್ತಾನೆ. ನಾನಂತೂ ಈ ವ್ಯವಹಾರಕ್ಕೆ ಕೈ ಹಾಕುವುದಿಲ್ಲ. ಯಾಕೆಂದರೆ ಪಾಪ, ಹುಸೇನಿ ಹೊಟ್ಟೆಪಾಡಿಗಾಗಿ ಗುಜರಿ ಹೆಕ್ಕುತ್ತಾನೆ. ವಾರಕ್ಕೊಮ್ಮೆ ಈ ಕರಿಬೇವಿನ ಸೊಪ್ಪು ಸಂಗ್ರಹಿಸಿ ಮಾರುತ್ತಾನೆ. ಅವನಿಗೆ ಮಕ್ಕಳಿಲ್ಲವಂತೆ ಹೆಂಡತಿಗೆ ಅನಾರೋಗ್ಯವಂತೆ' ಎಂದ.

'ಓಹೋ, ಹಾಗಿದೆಯೋ ವಿಷಯ? ಹಾಗಾದರೆ ಅವನಿಗೇ ಈ ವಿಷಯ ಹೇಳಪ್ಪ' ಎಂದರು ಕುಪ್ಪಣ್ಣಯ್ಯ.

ಹತ್ತು ದಿನಗಳ ಮೇಲೆ ತುಕ್ಕು ಹಿಡಿದ ಒಂದು ಸೈಕಲಿನಲ್ಲಿ ಬಂದಿಳಿದ ಗಾಡಿ ಹುಸೇನಿ ನೇರವಾಗಿ ಕುಪ್ಪಣ್ಣಯ್ಯನ ಹೋಟೆಲಿಗೆ ಬಂದು 'ಸ್ವಾಮಿ ಧನಿಗಳೇ, ಸಲಾಂ ಸಲಾಂ' ಎಂದು ಬಲದ ಕೈ ಮೇಲೆತ್ತಿದ. ಒಂದು ಕ್ಷಣ ಕುಪ್ಪಣ್ಣಯ್ಯನಿಗೆ ಇವನು ಯಾರು ಎಂದು ತಿಳಿಯದಾಯಿತು. ಗಾಡಿ ಹುಸೇನ ಇರಬಹುದೇ? ಎಂಬ ಸಂಶಯವೂ ಬಂತು. ಹಿಂದೆ ದಷ್ಟಪುಷ್ಟವಾಗಿ ಇದ್ದ ಹುಸೇನಿ, ಈಗ ಅವನು ಏರಿ ಬಂದ ಸೈಕಲಿನಷ್ಟು ಬಡವಾಗಿದ್ದ. ಅವನ ಕಣ್ಣುಗಳು ಆಳಕ್ಕೆ ಇಳಿದಿದ್ದುವು. ಗಡ್ಡ ಮತ್ತು ತಲೆ ಪೂರ್ತಿ ಬೆಳ್ಳಗಾಗಿತ್ತು. ಎತ್ತುಗಳ ಬೆನ್ನಿಗೆ 'ಪ್ಪ್, ಪ್ಪ್' ಎಂದು ಬಡಿದು ಅವುಗಳ ಬೆನ್ನು ಹೂಸುತ್ತಿದ್ದ ಅವನ ಕೈಗಳು ಈಗ ಎತ್ತುಗಳಿಗೆ 'ಪ್ಪ್' ಎಂದು ಬಡಿದರೆ ತಕ್ಷಣ "ಪಟ್" ಎಂದು ಎತ್ತುಗಳ ಬೆನ್ನುಗಳಿಂದ ಬರುತ್ತಿದ್ದ ಶಬ್ದ ಖಂಡಿತ ಹಿಂದಿನ ಹಾಗಿರಲಾರದು ಎಂಬಂತ್ತಿತ್ತು.

ಕುಪ್ಪಣ್ಣಯ್ಯ ಪ್ರತಿ ಸಲಾಂ ಮಾಡಿ ಗುರುತು ಹಿಡಯಲಾಗದಿದ್ದರೂ, ಗುರುತು ಹಿಡಿದವರಂತೆ



ನಟಿಸುತ್ತಾ 'ನಿಮ್ಮನ್ನೆಲ್ಲೋ ನೋಡಿದ ಹಾಗಿದೆಯಲ್ಲ?' ಎಂದರು.

ಹುಸೇನಿಯ ಪೇಲವ ಮುಖದಲ್ಲಿ ಪೂರ್ಣಿಮೆಯ ಚಂದ್ರನಂಥ ನಗು ಬಂತು. ಆತ 'ನಾನು, ಹುಸೇನಿ, ಸ್ವಾಮಿ, ಗಾಡಿ ಹುಸೇನಿ, ಕುಪ್ಪಣ್ಣಯ್ಯನೋರೋ' ಎಂದ.

ಕುಪ್ಪಣ್ಣಯ್ಯನ ಮುಖವೂ ಅರಳಿತು. ಅವರಿಗೆ ತಿಳಿಯದ ಹಾಗೆ ಅವರು ಅವನ ಬಳಿಗೆ ಬಂದು ಬೆನ್ನಿಗೆ ಕೈ ಹಾಕಿ 'ಬನ್ನಿ ಉಪಾಹಾರ ಮಾಡಿ' ಎಂದು ಒಂದು ಟೇಬಲಿನ ಹಿಂದೆ ಕುಳ್ಳಿರಿಸಿ 'ಗೋವಿಂದಯ್ಯ ಇವರಿಗೆ ಏನು ಬೇಕೋ ಅದು ಕೊಡು. ನಿನ್ನೆ ಮಾಡಿದ್ದ ಬೂಂದಿ ಲಾಡು ಇದ್ದರೆ ಅದನ್ನೂ ಕೊಡು' ಎಂದರು.

ಹುಸೇನಿ ಮುಜುಗರದಲ್ಲಿ 'ಅದೆಲ್ಲ ಬೇಡ ಸ್ವಾಮಿ. ಒಂದು ಕಪ್ ಚಹಾ ಸಾಕು' ಎಂದ. ಕುಪ್ಪಣ್ಣಯ್ಯ 'ಅದು ಹೇಗೆ ಆಗುತ್ತದೆ ಹುಸೇನಿಯವರೇ, ಎರಡು ದಶಕಗಳ ಮೇಲೆ ನೀವು ನಾನಿದ್ದಲ್ಲಿಗೆ ಬಂದಿದ್ದೀರಿ. ಆ ದಿನಗಳಲ್ಲಿ ನೀವು ಈ ರಥಬೀದಿಗೆ ಬಂದಷ್ಟು ಸಲ, ನಮ್ಮಲ್ಲಿ